## ಪೋಷಕರ ಕಿರಿಕಿರಿ!

ಇದೊಂದು ಹೊಸ ಬಗೆಯ ಸಮಸ್ಯೆ. ಬ್ರಿಟನ್‌ನಲ್ಲಿ ನಡೆಸಲಾದ ಹೊಸ ಸಮೀಕ್ಷೆಯೊಂದರ ಪ್ರಕಾರ ಸಾರ್ವಜನಿಕ ಪ್ರದೇಶಗಳಲ್ಲಿ ಪೋಷಕರ ವರ್ತನೆ ಮಕ್ಕಳಿಗೆ ಕಿರಿಕಿರಿ ತರುತ್ತದಂತೆ.

ಹರೆಯಕ್ಕೆ ಕಾಲಿಟ್ಟ ಮಕ್ಕಳ ಪಾಲಿಗೆ ತಂದೆ ಹೆಚ್ಚು ಅವಮಾನಕರ ರೀತಿಯಲ್ಲಿ ನಡೆದುಕೊಳ್ಳುತ್ತಾರಂತೆ. ಮನೆ ಅಥವಾ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಅತಿ ಉತ್ಸಾಹದಿಂದ ತಂದೆ ಕುಣಿದಾಡುವುದು ಮಕ್ಕಳಿಗೆ ಇಷ್ಟವಾಗುವುದಿಲ್ಲವಂತೆ.

ಇನ್ನು ಬ್ರಿಟನ್ ತಾಯಂದಿರು ಹೇಳುವ ಹಳೆಯ ಜೋಕುಗಳು ಅಥವಾ ಕುಡಿಯುವ ವರ್ತನೆಯೂ ಮಕ್ಕಳಿಗೆ ಇಷ್ಟವಾಗುವುದಿಲ್ಲ. ಇದಕ್ಕೆಂದೇ ಹರೆಯಕ್ಕೆ ಕಾಲಿಟ್ಟ ಒಂದೂವರೆ ಸಾವಿರ ಹುಡುಗ–ಹುಡುಗಿಯರನ್ನು ಕೇಳಿದ ಪ್ರಶ್ನೆಗೆ ಶೇಕಡಾ 88ರಷ್ಟು ಮಂದಿ ತಮ್ಮ ಪೋಷಕರಿಂದ ಅವಮಾನಕ್ಕೀಡಾಗುತ್ತಿದ್ದೇವೆ ಎಂದಿದ್ದಾರೆ.

ಅದರಲ್ಲಿ ಮುಕ್ಕಾಲು ಭಾಗ ಮಂದಿ ತಮ್ಮ ಗೆಳೆಯ/ ಗೆಳತಿಯನ್ನು ತಮ್ಮ ಪೋಷಕರಿಗೆ ಪರಿಚಯ ಮಾಡಿಕೊಡುವುದೇ ಇಲ್ಲವಂತೆ. ಶೇ. 63ರಷ್ಟು ಮಕ್ಕಳಿಗೆ ತಮ್ಮ ತಾಯಿಗಿಂತ ತಂದೆಯಿಂದ ಹೆಚ್ಚು ಅವಮಾನ ಆಗುತ್ತದೆ ಎಂಬ ಭಯವಂತೆ. ಆಧುನಿಕ ಕಾಲದ ಈ ಮಕ್ಕಳು ವಾರಕ್ಕೆ ಕೇವಲ ಮೂರೂವರೆ ಗಂಟೆ ಮಾತ್ರ ತಮ್ಮ ಪೋಷಕರೊಂದಿಗೆ ಕಳೆಯುತ್ತಿದ್ದಾರಂತೆ. ಆದರೆ ಸಾಮಾಜಿಕ ತಾಣದ ಮೂಲಕ ಇವರು ಹತ್ತು ಗಂಟೆಗೂ ಮೀರಿ ತಮ್ಮ ಸ್ನೇಹಿತರೊಂದಿಗೆ ಕಳೆಯುತ್ತಾರಂತೆ.

## ಪ್ಲೇಗ್ ಇನ್ನೂ ಜೀವಂತ!

14ನೇ ಶತಮಾನದಲ್ಲಿ ಮೂರನೇ ಒಂದು ಭಾಗದಷ್ಟು ಯೂರೋಪಿಯನ್ನರನ್ನು ಬಲಿ ತೆಗೆದುಕೊಂಡಿದ್ದ 'ಬ್ಲಾಕ್ ಡೆತ್' ಎಂದೇ ಖ್ಯಾತವಾಗಿದ್ದ ಪ್ಲೇಗ್ 21ನೇ ಶತಮಾನದಲ್ಲಿ ಇರುವುದರ ಕುರಿತು ವಿಜ್ಞಾನಿಗಳು ಸಂಶಯ ವ್ಯಕ್ತಪಡಿಸಿದ್ದಾರೆ.

ಪ್ಲೇಗ್‌ನಿಂದ ಮೃತಪಟ್ಟ ಹಲವರ ಕಳೇಬರಹದ ಡಿಎನ್‌ಎ ಪರೀಕ್ಷೆ ನಡೆಸಿದ ವಿಜ್ಞಾನಿಗಳಿಗೆ ಪುರಾತನ ಪ್ಲೇಗ್‌ನ ಕುರುಹು ದೊರೆತಿದ್ದು, ಆಧುನಿಕ ಪ್ಲೇಗಿಗೂ ಇದರ ನಂಟಿರುವುದು ಪತ್ತೆಯಾಗಿದೆ. ಆದರೆ ಎರಡರ ಗುಣ ಲಕ್ಷಣದಲ್ಲಿ ಸಾಕಷ್ಟು ಬದಲಾವಣೆಗಳಿವೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

ಪ್ಲೇಗ್ ಹರಡುವ ವೈರಾಣುಗಳ ವಂಶವಾಹಿಗಳು ಕಳೆದ 600 ವರ್ಷಗಳಲ್ಲಿ ಸಾಕಷ್ಟು ಬದಲಾವಣೆ ಕಂಡಿವೆ. ಆದರೆ ಆಧುನಿಕ ವೈಜ್ಞಾನಿಕ ಪದ್ಧತಿಯಿಂದ ಪ್ಲೇಗ್ ಎದುರಿಸುವ ಸಾಮರ್ಥ್ಯ ವೈದ್ಯಲೋಕಕ್ಕಿದೆ ಎಂದು ರಾಷ್ಟ್ರೀಯ ವಿಜ್ಞಾನ ಅಕಾಡೆಮಿಯ ಜೊಹಾನ್ನೆಸ್ ಕ್ರೌಸ್ ಹೇಳುತ್ತಾರೆ. ಇವರ ಹಾಗೂ ತಜ್ಞರನ್ನೊಳಗೊಂಡ ತಂಡವು ಲಂಡನ್ನಿನ ಸ್ಮಶಾನವೊಂದರಲ್ಲಿ ಸಾಮೂಹಿಕವಾಗಿ ಅಂತ್ಯಸಂಸ್ಕಾರ ಮಾಡಲಾದ ಮೃತ ದೇಹಗಳ ಅಸ್ಥಿಪಂಜರಗಳನ್ನು ಪರೀಕ್ಷೆಗೆ ಒಳಪಡಿಸಿದ್ದರು. ಅವುಗಳಲ್ಲಿ ಇಂದಿಗೂ ಪ್ಲೇಗಿನ ಗುಣಲಕ್ಷಣಗಳು ಕಂಡುಬಂದಿವೆ.

1904ರಲ್ಲಿ ಮುಂಬೈನಲ್ಲೂ ಪ್ಲೇಗಿಗೆ ಶೇ 3ರಷ್ಟು ಜನಸಂಖ್ಯೆ ಪ್ರಾಣ ಕಳೆದುಕೊಂಡಿದ್ದರು. ಆದರೆ ಆ ಸಮಯದಲ್ಲಿ ಆಧುನಿಕ ಔಷಧೋಪಚಾರ ಇರಲಿಲ್ಲ.

## ಸುಳ್ಳು ಶೋಧಕ ಯಂತ್ರ!

ಏರ್‌ಪೋರ್ಟ್‌ಗಳಲ್ಲಿ ವೀಸಾ ಪಡೆಯಲು ಹಲವರು ಬಗೆ ಬಗೆಯ ಸುಳ್ಳು ಹೇಳುವುದುಂಟು. ಹೀಗೋ ಹಾಗೋ ದೇಶದೊಳಗೆ ನುಸುಳುವ ಹಲವರನ್ನು ಪತ್ತೆ ಮಾಡಿ ಅವರವರ ದೇಶಕ್ಕೆ ಕಳುಹಿಸುವುದೇ ಸಾಹಸದ ಕೆಲಸ. ಹೀಗಾಗಿ ಸುಳ್ಳನ್ನು ಆರಂಭದಲ್ಲೇ ಪತ್ತೆ ಮಾಡುವ ಹೊಸ ಸಾಧನವೊಂದನ್ನು ಅಭಿವೃದ್ಧಿ ಪಡಿಸಲಾಗಿದೆ.

ದೂತಾವಾಸ ಕಚೇರಿಗೆ ವೀಸಾ ಪಡೆಯಲು ಬಂದ ವ್ಯಕ್ತಿ ಅಲ್ಲಿನ ಅಧಿಕಾರಿಗಳು ಕೇಳುವ ಪ್ರಶ್ನೆಗಳಿಗೆ ಸರಿ ಉತ್ತರ ನೀಡುತ್ತಾನೋ ಇಲ್ಲವೋ ಎಂಬ ಮಾಹಿತಿಯನ್ನು ಈ ಸಾಧನ ಕ್ಷಣ ಮಾತ್ರದಲ್ಲಿ ನೀಡುತ್ತದಂತೆ. ಇದು ಹೇಗೆ ಎಂದರೆ? ಸುಳ್ಳು ಹೇಳುವ ಸಂದರ್ಭದಲ್ಲಿ ಸಹಜವಾಗಿ ಮನುಷ್ಯನ ದೇಹದಲ್ಲಿ ಕೆಲವು ಬದಲಾವಣೆಗಳಾಗುತ್ತವೆ. ಇದನ್ನೇ ಆಧರಿಸಿ ತಂತ್ರಾಂಶ ಸಿದ್ಧಪಡಿಸಲಾಗಿದೆ. ಸುಳ್ಳು ಹೇಳುವಾಗ ಮುಖ, ಕಣ್ಣು ಅವರ ಹಾವಭಾವ ಇತ್ಯಾದಿಗಳ ಬದಲಾವಣೆಗಳನ್ನು ಗಮನಿಸಿ ವ್ಯಕ್ತಿಯ ಮಾತು ಸುಳ್ಳೋ ಅಥವಾ ಸತ್ಯವೋ ಎಂದು ಹೇಳುತ್ತದೆ. ಕೇವಲ ಇಷ್ಟೇ ಅಲ್ಲದೆ, ಸುಳ್ಳು ಹೇಳುವ ಸಂದರ್ಭದಲ್ಲಿ ದೇಹದ ಶಾಖ ಹೆಚ್ಚಾಗುತ್ತದಂತೆ. ಇದನ್ನು ಶಾಖ ಗ್ರಹಿಸುವ ಕ್ಯಾಮೆರಾಗಳನ್ನು ಇಲ್ಲಿ ಅಳವಡಿಸಲಾಗಿದೆಯಂತೆ. ಇದರಿಂದ ಸುಳ್ಳು– ನಿಜದ ಫಲಿತಾಂಶ ಸಿಗುತ್ತದೆ.

■ ಐಎಎನ್‌ಎಸ್

ಮಧುಮೇಹಿಗಳೇ!
ನಿಮ್ಮ ಆರೋಗ್ಯದ ಕಾಳಜಿ ನಮ್ಮದು
ಯಸಾಕಾ
ನಿಮ್ಮ ಭರವಸೆಯ ರಕ್ಷಕ
- 12 ಅತ್ಯಮೂಲ್ಯ, ದೀರ್ಘ ಕಾಲ ಪರೀಕ್ಷಿಸಲ್ಪಟ್ಟ ದಿವ್ಯ ಗಿಡಮೂಲಿಕೆಗಳ ಸಂಯೋಜನೆ
- ಅಮೂಲ್ಯ ಅಂಗಗಳಾದ ಕಿಡ್ನಿ, ಕಣ್ಣು ಹಾಗೂ ನರಗಳಿಗೆ ಆಗುವ ಅಪಾಯ ತಪ್ಪಿಸುತ್ತದೆ.
- ಗಾಯಗಳನ್ನು ಗುಣಪಡಿಸುವ ಶಕ್ತಿಯ ವರ್ಧನೆ
- ಜೀರ್ಣ ಕ್ರಿಯೆಯನ್ನು ಚುರುಕುಗೊಳಿಸುತ್ತದೆ
- ಜೀವರಕ್ಷಕ – ರೋಗ ನಿರೋಧಕ ಶಕ್ತಿ ವರ್ಧನೆ
- ಪ್ಯಾನಕ್ರಿಯಾಸ್ ಗ್ರಂಥಿಯನ್ನು ಪ್ರಚೋದಿಸುತ್ತದೆ
- ಡಯಾಬಿಟಿಸ್‌ನ ಅಡ್ಡ ಪರಿಣಾಮಗಳಿಂದ ರಕ್ಷಣೆ
- ಸುಸ್ತನ್ನು ಹೋಗಲಾಡಿಸುವುದು
- ಶಕ್ತಿಭರಿತರನ್ನಾಗಿ ಕ್ರಿಯಾಶೀಲರನ್ನಾಗಿ ಇಡುವುದು.




A quality product from
Simandhar
E-Mail:simandharherbal@yahoo.com
www.simandharherbal.com
PHONE:022-24380299
ಎಲ್ಲ ಪ್ರಮುಖ ಮೆಡಿಕಲ್ಸ್ ಮತ್ತು ಆಯುರ್ವೇದಿಕ್ ಅಂಗಡಿಗಳಲ್ಲಿ ಲಭ್ಯ
HELP LINE: 9611688499